# ಶ್ರೀ ರಾಮ ಲಲಿತ ಕಲಾ ಮಂದಿರ (ರಿ.)

9ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 70.

## ಅಭಿನಂದನಾ ಪತ್ರ

ಶ್ರೀ ರಾಮ ಲಲಿತ ಕಲಾ ಮಂದಿರದ ಸ್ಥಾಪಕರಾದ ದಿ|| ಜಿ. ವೇದಾಂತ ಅಯ್ಯಂಗಾರ್ ಅವರ
50ನೇ ಪುಣ್ಯಸ್ಮರಣೆ ಸಂದರ್ಭ ನಡೆದ ವಿಶೇಷ ಸಮಾರಂಭದಲ್ಲಿ
.ಪದ್ಮಭೂಷಣ ಡಾ|| ಆರ್.ಕೆ. ಶ್ರೀಕಂಠನ್
ಅವರಿಗೆ 'ಸಂಗೀತ ವೇದಾಂತ ಧುರೀಣ' ಬಿರುದು ಪ್ರದಾನ.



ಕರ್ನಾಟಕ ಶಾಸ್ತ್ರೀಯ ಸಂಗೀತದ ಧ್ರುವತಾರೆ 'ಸಂಕ್ರಾಂತಿ ಪುರುಷ', ನಮ್ಮೆಲ್ಲರ ನೆಚ್ಚಿನ ಸಂಗೀತ ಕಲಾನಿಧಿ, ಸಂಗೀತ ಕಲಾರತ್ನ, ಪದ್ಮಭೂಷಣ ಪುರಸ್ಕೃತ ಡಾ|| ರುದ್ರಪಟ್ನಂ ಕೃಷ್ಣಶಾಸ್ತ್ರಿ ಶ್ರೀಕಂಠನ್ ನಮ್ಮ ಕರ್ನಾಟಕ ಸಂಗೀತ ಕಲಾಪ್ರಪಂಚವನ್ನು ತಮ್ಮ ಸಿರಿಕಂಠದಿಂದ ಶ್ರೀಮಂತಗೊಳಿಸಿದ ಕಲಾತಪಸ್ವಿ.

ಕರ್ನಾಟಕ ಶಾಸ್ತ್ರೀಯ ಸಂಗೀತದ ಅಂತಃಸತ್ತ್ವವನ್ನು ಅರಿತು ಸಮರ್ಥ ಬೋಧಕರಾಗಿ, ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ವಿಶಿಷ್ಠ ಕಲಾವಿದರು. ಸದ್ಗುರು ಶ್ರೀತ್ಯಾಗರಾಜಸ್ವಾಮಿಗಳವರ ನೇರ ಶಿಷ್ಯ ಪರಂಪರೆಗೆ ಸೇರಿದ ಖ್ಯಾತಿ ಇವರದು. ಡಾ|| ಆರ್.ಕೆ. ಶ್ರೀಕಂಠನ್ ಒಂದು ಅಪೂರ್ವ ಪರಂಪರೆಯ ರಾಯಭಾರಿ. ಸಂಗೀತದಲ್ಲಿ ಇವರ ಸಂಪ್ರದಾಯಬದ್ಧ ವಿಶಿಷ್ಠ ಶೈಲಿ, ಹಾಗೆಯೇ ಸಮನ್ವಯ ದೃಷ್ಠಿ ಎಲ್ಲಾ ಕಲಾರಸಿಕರನ್ನು ಆಕರ್ಷಿಸುತ್ತಾ ಬಂದಿದೆ.

ಸಂಗೀತ ಕಲಾನಿಧಿ, ಸಂಗೀತ ಕಲಾರತ್ನ ಡಾ|| ಆರ್.ಕೆ. ಶ್ರೀಕಂಠನ್ ಶೃತಿ ಶುದ್ಧಿ, ಸಾಹಿತ್ಯ ಶುದ್ಧಿ ಮತ್ತು ಭಾವ ಶುದ್ಧಿಗಳ ಸುಂದರ ಸಂಗಮವಾಗಿದ್ದಾರೆ. ತಮ್ಮ ಸಂಗೀತ ಯಾತ್ರೆಯಲ್ಲಿ ಲಕ್ಷಾವಧಿ ಕಲಾರಸಿಕರನ್ನು ತಮ್ಮ ಸಿರಿಕಂಠದ ಗಾಯನದಿಂದ ಸ್ಪರ್ಶಿಸಿದ್ದಾರೆ. ಭಾರತೀಯ ಸಂಸ್ಕೃತಿಯ, ಕನ್ನಡ ಸಾಹಿತ್ಯ ಪರಂಪರೆಯ, ದಾಸ ಸಾಹಿತ್ಯದ ಹಾಗೂ ಇತರ ಕಲಾಪ್ರಾಕಾರಗಳ ಆಳವನ್ನು ಕಂಡ ಕಲಾವಿದರಾಗಿದ್ದಾರೆ ನಮ್ಮ ಶ್ರೀಕಂಠನ್. ಅವರ ಸಂಗೀತ ಯಾತ್ರೆಯಲ್ಲಿ ಅದೆಷ್ಟೋ ಬಿರುದು, ಪ್ರಶಸ್ತಿ, ಗೌರವಗಳು ಅವರನ್ನು ಹುಡುಕಿಕೊಂಡು ಬಂದಿವೆ.

ಡಾ|| ಆರ್.ಕೆ. ಶ್ರೀಕಂಠನ್ ಅವರ ಸಾರ್ಥಕ ಸಂಗೀತ ಜೀವನವನ್ನು ಗೌರವಿಸುತ್ತಾ, ಶ್ರೀ ರಾಮ ಲಲಿತ ಕಲಾ ಮಂದಿರ ತನ್ನ ಪ್ರತಿಷ್ಠಿತ ಪ್ರಶಸ್ತಿಯಾದ 'ಸಂಗೀತ ವೇದಾಂತ ಧುರೀಣ' ಎಂಬ ಪ್ರಶಸ್ತಿಯನ್ನು ನೀಡಿ ಅವರನ್ನು ಆದರದಿಂದ ಗೌರವಿಸುತ್ತಿದೆ. ಭಗವಂತನ ಅನುಗ್ರಹ ಸದಾ ಅವರ ಮೇಲಿದ್ದು ಅವರಿಗೆ ಎಲ್ಲ ರೀತಿಯ ಮಂಗಳವನ್ನುಂಟುಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

| | | |
|---|---|---|
| ಜಿ.ವಿ. ನೀಲಾ<br>ಮುಖ್ಯ ಸ್ಥಾಪಕರು | ಬೆಂಗಳೂರು<br>4-3-2012, ಭಾನುವಾರ | ಡಿ.ಆರ್. ಶ್ರೀಕಂಠಯ್ಯ<br>ಅಧ್ಯಕ್ಷರು |